**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ**
**ಸರ್ವ ಶಿಕ್ಷಣ ಅಭಿಯಾನ, ಪಾಲಿಸಿ ಪ್ಲಾನಿಂಗ್ ಘಟಕ, ನೃಪತುಂಗ ರಸ್ತೆ, ಬೆಂಗಳೂರು -560 001**

ಸಂಖ್ಯೆ: ಆ.ಕ./ಪಾ.ಪ್ಲಾಘ./ಸಶಿ.ಅ/ನಿ.ಅ.ಕಾ-1/ಜಿ.ಆ./ಕಾ.ಅ.ಮಾ.ಸೂ/2009-10 ದಿ: 24-08-2009

**ಜ್ಞಾಪನ**

**ವಿಷಯ:** 2009-10ನೇ ಸಾಲಿನ ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮದ ಅನುದಾನ ಬಿಡುಗಡೆ ವಿವರ ಹಾಗೂ ಜಿಲ್ಲಾ ಮಟ್ಟದ ಅನುಷ್ಠಾನ ಮಾರ್ಗಸೂಚಿ ಕುರಿತು.

## ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮ ಅನುಷ್ಠಾನದ ಮಾರ್ಗಸೂಚಿ - 2009-10

ಸಾರ್ವಜನಿಕ ಶಿಕ್ಷಣ ಇಲಾಖೆಯ ಪಾಲಿಸಿ ಪ್ಲಾನಿಂಗ್ ಘಟಕದ ನೇತೃತ್ವದಲ್ಲಿ ಸರ್ವ ಶಿಕ್ಷಣ ಅಭಿಯಾನ, ಯುನಿಸೆಫ್ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಷನ್ ನೆರವಿನಿಂದ ಈಗಾಗಲೇ ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮ [Management Development programme-MDP] ವನ್ನು 2006-07 ರಿಂದ ರಾಜ್ಯದ 16 ಜಿಲ್ಲೆಗಳಲ್ಲಿ ಆಯಾ ಜಿಲ್ಲೆಯ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಹಾಗೂ ನಿರ್ವಹಣಾ ಅಭಿವೃದ್ಧಿ ಸುಗಮಕಾರರ ನೆರವಿನಿಂದ ಅನುಷ್ಠಾನಗೊಳಿಸಲಾಗಿದೆ.

### ಹಿನ್ನೆಲೆ

ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮವು ಕ್ಷೇತ್ರ ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿ [¨BRP & CRP] ಗಳ ನಿರ್ವಹಣಾ ಸಾಮರ್ಥ್ಯವನ್ನು ಉತ್ತಮಪಡಿಸುವ ಉದ್ದೇಶ ಹೊಂದಿದೆ. ಈ ಕಾರ್ಯಕ್ರಮದ ಪ್ರಮುಖ ಕಲಿಕಾ ಭಾಗವಾಗಿರುವ ಗುಣಮಟ್ಟದ ಸುಧಾರಣಾ ಪ್ರಕಲ್ಪ [Quality Improment Projects-QIP] ಗಳನ್ನು ಯೋಜಿಸಿ, ಅನುಷ್ಠಾನಗೊಳಿಸುವ ಹಂತಗಳಲ್ಲಿ ಅವರು ಎಂಡಿಪಿ ತರಬೇತಿಯಲ್ಲಿ ಅರ್ಥೈಸಿಕೊಂಡಿದ್ದ ನಿರ್ವಹಣಾ ಪರಿಕಲ್ಪನೆಗಳು ಮತ್ತು ನಿರ್ವಹಣಾ ಕೌಶಲ್ಯಗಳನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸುವ ಅವಕಾಶ ಪಡೆಯುತ್ತಾರೆ. ಕಲಿಕಾ ಪ್ರಕ್ರಿಯೆಯಲ್ಲಿ ಶೈಕ್ಷಣಿಕ ಗುಣಮಟ್ಟವನ್ನು ಅಭಿವೃದ್ಧಿಗೊಳಿಸಲು ಸಮರ್ಥವಾಗಿ ಯೋಜಿಸುವ ಹಾಗೂ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸುವ ಕೌಶಲ್ಯಗಳನ್ನು ಹೊಂದುತ್ತಾರೆ.

ಪ್ರಸಕ್ತ 2009-10ನೇ ಸಾಲಿನಲ್ಲಿ ಕಳೆದ ಸಾಲಿನಲ್ಲಿ ಅನುಷ್ಠಾನಗೊಳಿಸಿದ 16 ಜಿಲ್ಲೆಗಳ ಪೈಕಿ 15 ಜಿಲ್ಲೆಗಳಲ್ಲಿ ಮತ್ತು ಹೊಸ 4 ಜಿಲ್ಲೆಗಳಾದ ತುಮಕೂರು, ಚಿಕ್ಕಮಗಳೂರು, ಚಿಕ್ಕೋಡಿ, ರಾಮನಗರ ಸೇರಿದಂತೆ ಒಟ್ಟು 19 ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಅನುಷ್ಠಾನವಾಗುತ್ತದೆ. ಈಗಾಗಲೇ ಈ ಕಾರ್ಯಕ್ರಮದಡಿಯಲ್ಲಿ 16 ಜಿಲ್ಲೆಗಳ 1057 ಕ್ಷೇತ್ರ/ಸಮೂಹ ಸಂಪನ್ಮೂಲ ವ್ಯಕ್ತಿಗಳು ತರಬೇತಿ ಪಡೆದಿದ್ದಾರೆ.

ಕೆಲವು ಜಿಲ್ಲೆಗಳಲ್ಲಿ ಲಭ್ಯವಿರುವ ಎಲ್ಲಾ ಕ್ಷೇತ್ರ/ಸಮೂಹ ಸಂಪನ್ಮೂಲ ವ್ಯಕ್ತಿಗಳ ಎಂಡಿಪಿ ತರಬೇತಿ ಪೂರ್ಣಗೊಂಡಿದ್ದು, ಮಿಕ್ಕ ಜಿಲ್ಲೆಗಳಲ್ಲಿ ಉಳಿದವರನ್ನು ಪ್ರಸಕ್ತ ಸಾಲಿನಲ್ಲಿ ತರಬೇತಿಗೊಳಿಸಲಾಗುತ್ತದೆ. ಈ ಸಾಲಿನಲ್ಲಿ ತರಬೇತಿ ಪ್ರಾರಂಭಿಸಿರುವ ಮೇಲೆ ತಿಳಿಸಿರುವ 4 ಜಿಲ್ಲೆಗಳಲ್ಲಿ ಸಿ.ಆರ್.ಪಿ/ಬಿ.ಆರ್.ಪಿ ಗಳಿಗೆ ಈ ವರ್ಷದ ಎಂಡಿಪಿ [QIP] ತರಬೇತಿಯ ಮೂಲಕ ತಲುಪುವ ಗುರಿ ಹೊಂದಲಾಗಿದೆ. ಈಗಾಗಲೇ ಈ ಪ್ರಕ್ರಿಯೆಯಲ್ಲಿ ಭಾಗವಹಿಸಿ ತರಬೇತಿ ಪಡೆದಿರುವ ಸಿಆರ್‌ಪಿ/ ಬಿಆರ್‌ಪಿಗಳು ಸ್ವಇಚ್ಛೆಯಿಂದ ಇನ್ನೊಂದು ಪ್ರಕಲ್ಪದ ಅನುಷ್ಠಾನದಲ್ಲಿ ಪಾಲ್ಗೊಂಡು ನಿರ್ವಹಣಾ ಕೌಶಲ್ಯಗಳನ್ನು ಉತ್ತಮ ಪಡಿಸಿಕೊಳ್ಳುವ ಅಭಿಲಾಷೆ ವ್ಯಕ್ತಪಡಿಸಿದ್ದರಿಂದ ಇನ್ನೊಂದು ಅವಕಾಶ [SQIP] ಕಲ್ಪಿಸಲಾಗಿದೆ. **[ಅನುಬಂಧ-1]**

ಪ್ರಥಮ ಬಾರಿಗೆ ಗುಣಮಟ್ಟ ಸುಧಾರಣಾ ಪ್ರಕಲ್ಪ [QIP] ಅನುಷ್ಠಾನಗೊಳಿಸುವವರಿಗಾಗಿ ವಿವಿಧ ಹಂತಗಳಲ್ಲಿ [6+4+2+2+3] ಹದಿನೇಳು ದಿನಗಳ ಸನಿವಾಸ ತರಬೇತಿ ಹಾಗೂ ಯೋಜಿತ ಪ್ರಕಲ್ಪಗಳ ಪ್ರಾಯೋಗಿಕ

ಅನುಷ್ಠಾನಕ್ಕಾಗಿ ಪ್ರತಿ ಹಂತಗಳ ನಡುವೆ ಒಟ್ಟು 14 ವಾರಗಳ ಕಾಲಾವಕಾಶವಿರುತ್ತದೆ. ಪ್ರಕಲ್ಪ ಅನುಷ್ಠಾನದ ನಂತರ ಇತರರೊಂದಿಗೆ ಹಾಗೂ ಅಧಿಕಾರಿಗಳೊಂದಿಗೆ ತಮ್ಮ ಅನುಭವ ಹಂಚಿಕೊಳ್ಳಲು 2 ದಿನದ ಪ್ರಕಲ್ಪ ಮಂಡನೆ ಕಾರ್ಯಾಗಾರಕ್ಕಾಗಿ ಅವಕಾಶ ಕಲ್ಪಿಸಲಾಗಿದೆ. ಈ ಎಲ್ಲಾ ಹಂತಗಳಲ್ಲಿ ನುರಿತ, ತರಬೇತಿ ಹೊಂದಿದ ಸುಗಮಕಾರರು ಮಾರ್ಗದರ್ಶನ ಮಾಡುತ್ತಾರೆ. ಎರಡನೇ ಬಾರಿಗೆ [Second Quality Impropment Project-SQIP] ಪ್ರಕಲ್ಪ ಅನುಷ್ಠಾನಗೊಳಿಸಿ ನಿರ್ವಹಣಾ ಕೌಶಲ್ಯಗಳನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಬಯಸುವವರಿಗಾಗಿ ಈ ಮೊದಲು ಭಾಗವಹಿಸಿದ್ದ 13 ದಿನಗಳ ಪ್ರಾಥಮಿಕ ತರಬೇತಿಯನ್ನು ಮಾರ್ಪಡಿಸಿ 5 ದಿನಗಳ ತರಬೇತಿಯಾಗಿ ವಿನ್ಯಾಸಗೊಳಿಸಿದೆ. ನಂತರ 6 ದಿನಗಳ ತರಬೇತಿ ಹಾಗೂ 11 ವಾರಗಳ ಅನುಷ್ಠಾನ ಅವಧಿ ಮತ್ತು 2 ದಿನಗಳ ಪ್ರಕಲ್ಪ ಮಂಡನೆಗೆ ಅವಕಾಶವಿರುವಂತೆ [SQIP] ತರಬೇತಿಯನ್ನು ರೂಪಿಸಲಾಗಿದೆ. [**ಅನುಬಂಧ-2**].

## ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನದಲ್ಲಿ ವಿವಿಧ ಹಂತದ ಅಧಿಕಾರಿಗಳ ಪಾತ್ರ

ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಜಿಲ್ಲಾ ತರಬೇತಿ ಸಂಸ್ಥೆಯ ಮುಖ್ಯಸ್ಥರು, ನೋಡಲ್ ಅಧಿಕಾರಿಗಳು, ಸುಗಮಕಾರರು ಹಾಗೂ ವಿವಿಧ ಹಂತದ ಇತರೆ ಶಿಕ್ಷಣಾಧಿಕಾರಿಗಳ ಪಾತ್ರ ಬಹಳ ಪ್ರಮುಖವಾದದ್ದು. ತರಬೇತಿ ಪ್ರಕ್ರಿಯೆಯ ಸಂದರ್ಭದಲ್ಲಿ ಹಾಗೂ ಆಯ್ದು ಶಾಲೆ/ಕ್ಲಸ್ಟರ್‌ಗಳಲ್ಲಿ ಶೈಕ್ಷಣಿಕ ಗುಣಮಟ್ಟ ಉತ್ತಮಪಡಿಸಲು ಅನುಷ್ಠಾನಗೊಳಿಸುವ ಪ್ರಕಲ್ಪದ ವಿವಿಧ ಹಂತಗಳಲ್ಲಿ ಕ್ಷೇತ್ರ/ಸಮೂಹ ಸಂಪನ್ಮೂಲ ವ್ಯಕ್ತಿಗಳಿಗೆ ಆಯಾ ಮೇಲಾಧಿಕಾರಿಗಳ ಹಾಗೂ ಸಹೋದ್ಯೋಗಿಗಳ ಸಹಕಾರ/ಮಾರ್ಗದರ್ಶನ ಅತ್ಯಗತ್ಯ. ಈ ಸಹಕಾರ/ಮಾರ್ಗದರ್ಶನದ ಲಭ್ಯತೆಯು ಇಡೀ ಕಲಿಕಾ ಪ್ರಕ್ರಿಯೆಯ ಮೇಲೆ ತನ್ನದೇ ಪ್ರಭಾವ ಬೀರುವುದಲ್ಲದೆ ನಿರ್ವಹಣಾ ಕೌಶಲ್ಯಗಳ ಅಭಿವೃದ್ಧಿಗೆ ಹಾಗೂ ಶಾಲಾ ಹಂತದ ಶಿಕ್ಷಣದ ಗುಣಮಟ್ಟ ಅಭಿವೃದ್ಧಿಗೆ ನೇರವಾಗಿ ಸಂಬಂಧಿಸಿದೆ. [**ಅನುಬಂಧ-3** ರಲ್ಲಿ ರಾಜ್ಯ/ಜಿಲ್ಲೆಯ ವಿವಿಧ ಹಂತಗಳಲ್ಲಿ ಈ ಯೋಜನೆಯಲ್ಲಿ ಭಾಗವಹಿಸುವವರ ಪಾತ್ರ ಹಾಗೂ ಜವಾಬ್ದಾರಿಗಳನ್ನು ವಿವರಿಸಲಾಗಿದೆ.]

## ಜಿಲ್ಲಾ ಮಟ್ಟದ ಗುಣಮಟ್ಟ ಅಭಿವೃದ್ಧಿ ಕಾರ್ಯಕ್ರಮ ಅನುಷ್ಠಾನದಲ್ಲಿ ಭರಿಸಬೇಕಾದ ವೆಚ್ಚದ ವಿವರ

ಜಿಲ್ಲಾ ಮಟ್ಟದ ಕಾರ್ಯಕ್ರಮ ಅನುಷ್ಠಾನದ ವಿವಿಧ ಹಂತಗಳ ವಿವಿಧ ಚಟುವಟಿಕೆಗಳ ಅನುಷ್ಠಾನಕ್ಕೆ ವೆಚ್ಚವನ್ನು ಸರ್ವ ಶಿಕ್ಷಣ ಅಭಿಯಾನ ಹಾಗೂ Unicefನ ಅನುದಾನದಿಂದ ಭರಿಸಲಾಗುತ್ತಿದೆ. [ಮೊದಲ ತ್ರೈಮಾಸಿಕ ಅನುದಾನ ವಿವರ **ಅನುಬಂಧ-4**]. ಸರ್ವ ಶಿಕ್ಷಣ ಅಭಿಯಾನ ಅನುದಾನವು ಶಿಕ್ಷಕರ ತರಬೇತಿ ಅನುದಾನ ಹಾಗೂ ಸಂಶೋಧನೆ, ಮೌಲ್ಯಮಾಪನ, ನಿರ್ವಹಣಾ ಮತ್ತು ಮೇಲ್ವಿಚಾರಣೆ [REMS] ಶೀರ್ಷಿಕೆಯಡಿ ಅನುದಾನ ನೀಡುತ್ತಿದ್ದು, ಶಿಕ್ಷಕರ ತರಬೇತಿ ಅನುದಾನವನ್ನು ಶಿಬಿರಾರ್ಥಿಗಳ ತರಬೇತಿಗಾಗಿ ಹಾಗೂ [REMS]ನ ಅನುದಾನವನ್ನು ಪ್ರಕಲ್ಪ ಅನುಷ್ಠಾನಕ್ಕಾಗಿ ಮಾತ್ರ ಬಳಸಬಹುದಾಗಿದೆ. ಸರ್ವ ಶಿಕ್ಷಣ ಅಭಿಯಾನದ ಅನುದಾನದಡಿಯಲ್ಲಿ ಬಳಸಿದ ಒಟ್ಟು ಹಣಕ್ಕೆ ಮೂಲ ರಸೀದಿಗಳನ್ನು ಪ್ರತ್ಯೇಕ ಕಡತದಲ್ಲಿರಿಸಿ ನಿರ್ವಹಿಸಬೇಕು. ಶಿಕ್ಷಕರ ತರಬೇತಿಗಾಗಿ ಸರ್ವ ಶಿಕ್ಷಣ ಅಭಿಯಾನದ ಅನುದಾನಕ್ಕಿಂತ ಹೆಚ್ಚಾದ ಖರ್ಚನ್ನು Unicefನ ಅನುದಾನದಿಂದ ಭರಿಸಬಹುದು. ಬಿಡುಗಡೆಯಾದ ಒಟ್ಟು ಮೊತ್ತಕ್ಕೆ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಖರ್ಚು ಆಯವ್ಯಯದ ವಿವರವನ್ನು ಪಾಲಿಸಿ ಪ್ಲಾನಿಂಗ್ ಘಟಕಕ್ಕೆ ಸಲ್ಲಿಸಬೇಕು.

ಸರ್ವ ಶಿಕ್ಷಣ ಅಭಿಯಾನದ ಅನುದಾನ ಬಳಸಲು ನಿಗಧಿಪಡಿಸಿದ ಚಟುವಟಿಕೆಗಳನ್ನು ಹೊರತುಪಡಿಸಿದ ಇತರೆ ಎಲ್ಲಾ ಚಟುವಟಿಕೆಗಳ ಖರ್ಚನ್ನು Unicef ಅನುದಾನದಿಂದ ಭರಿಸಬಹುದಾಗಿದೆ. ಈ ಖರ್ಚು ವೆಚ್ಚಗಳು ನಿಗಧಿತ ಚಟುವಟಿಕೆಗಳ ಗರಿಷ್ಠ ವೆಚ್ಚದ ಮಿತಿಯನ್ನು ಮೀರದಂತಿರಬೇಕು. ಸಂಬಂಧಿಸಿದ ಮೂಲ ರಸೀದಿಗಳನ್ನು Unicefನ ಸಂಬಂಧಿಸಿದ ಪ್ರತ್ಯೇಕ ಕಡತದಲ್ಲಿ ನಿರ್ವಹಿಸಬೇಕು. Unicef ಸಂಸ್ಥೆಯವರು ತ್ರೈಮಾಸಿಕ ಕಂತಿನಲ್ಲಿ ಹಣ ಬಿಡುಗಡೆ ಮಾಡುವುದರಿಂದ ಮೊದಲ ತ್ರೈಮಾಸಿಕದ [ಜುಲೈ, ಆಗಸ್ಟ್, ಸೆಪ್ಟೆಂಬರ್] ಖರ್ಚು ವೆಚ್ಚಕ್ಕೆ ಸೆಪ್ಟೆಂಬರ್ 2009 ಹಾಗೂ ಎರಡನೇ ತ್ರೈಮಾಸಿಕ [ಅಕ್ಟೋಬರ್, ನವೆಂಬರ್, ಡಿಸೆಂಬರ್] ಖರ್ಚು ವೆಚ್ಚದ ಅನುದಾನ ಬಳಕೆ ಪ್ರಮಾಣ ಪತ್ರ [Utilization Certificate] ವನ್ನು ಡಿಸೆಂಬರ್ 2009ರಲ್ಲಿ ಸಲ್ಲಿಸಿ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಮೂಲ ರಸೀದಿಗಳನ್ನು ಸಲ್ಲಿಸಲು ಕೋರಿದೆ. [ಬಳಕೆ ಪ್ರಮಾಣ ಪತ್ರ ಮಾದರಿ **ಅನುಬಂಧ-5**]

ಪ್ರತಿ ವರ್ಷ ಒಟ್ಟು 19 ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಅನುಷ್ಠಾನ ನಡೆಯುತ್ತಿರುವುದರಿಂದ ಯಾವುದೇ ಒಂದು ಜಿಲ್ಲೆಯ ಬಳಕೆ ಪ್ರಮಾಣ ಪತ್ರ [UC] ಸಕಾಲದಲ್ಲಿ ತಲುಪದಿದ್ದರೆ ಇತರೆ ಎಲ್ಲಾ ಜಿಲ್ಲೆಗಳಿಗೂ ಮುಂದಿನ ಹಂತದ ಅನುದಾನ ಬಿಡುಗಡೆ ವಿಳಂಬವಾಗುವುದರಿಂದ ಬಳಕೆ ಪ್ರಮಾಣ ಪತ್ರವನ್ನು [UC] ನೋಡಲ್ ಅಧಿಕಾರಿಗಳು ಖುದ್ದಾಗಿ ಸಕಾಲದಲ್ಲಿ ಪಾಲಿಸಿ ಪ್ಲಾನಿಂಗ್ ಘಟಕಕ್ಕೆ ಸಲ್ಲಿಸತಕ್ಕದ್ದು. [ಇಲ್ಲದಿದ್ದಲ್ಲಿ Unicefನವರು ಜಿಲ್ಲೆಯ ಒಟ್ಟಾರೆ ಅನುದಾನವನ್ನು ತಡೆ ಹಿಡಿಯುವ ಸಾಧ್ಯತೆ ಇದೆ]

## ಎಂಡಿಪಿ ಕಾರ್ಯಕ್ರಮದ ಜಿಲ್ಲಾ ಹಂತದ ಚಟುವಟಿಕೆಗಳು ಹಾಗೂ ಉಪ ಶೀರ್ಷಿಕೆಗಳ ವಿವರ:-

ಯಾವುದೇ ಶೀರ್ಷಿಕೆಯ ಘಟಕ ವೆಚ್ಚವು ಮೂಲ ದರದ ಮಿತಿಯನ್ನು ಮೀರದಂತೆ ನಿರ್ವಹಿಸುವುದು [ಮೂಲ ದರದ ವಿವರಗಳಿಗಾಗಿ **ಅನುಬಂಧ-6(a,b,c,d,e)** ನ್ನು ನೋಡಿ]

**ತರಬೇತಿ ತಂಡ:-**

- ಶಿಬಿರಾರ್ಥಿಗಳ ಸಂಖ್ಯೆ – 30 [ಬಿಆರ್‌ಪಿ+ಸಿಆರ್‌ಪಿಗಳು]
- ಎಂ.ಡಿ.ಎಫ್‌ಗಳ [ಸುಗಮಕಾರರು] ಸಂಖ್ಯೆ – 03 [ಗರಿಷ್ಠ]
- ಲೆಕ್ಕ ಪತ್ರ/ಗುಮಾಸ್ತರು – 01
- ಡಿ ಗ್ರೂಪ್ ನೌಕರರು – 01

**ತರಬೇತಿ ಹಂತದ ಖರ್ಚು ವೆಚ್ಚಗಳು** – QIPನ [6+4+3+2+2+2] ಹಾಗೂ SQIPನ [5+3+2] ದಿನಗಳ ತರಬೇತಿಗೆ ಈ ಕೆಳಕಂಡ ನಿಯಮಗಳು ಅನ್ವಯಿಸುತ್ತವೆ.

## ಪ್ರಯಾಣ ಭತ್ಯೆ

ತರಬೇತಿಗೆ ಹಾಜರಾಗುವ ಶಿಬಿರಾರ್ಥಿಗಳಿಗೆ ಪ್ರಯಾಣ ಹಾಗೂ ದಿನ ಭತ್ಯೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳನುಸಾರ ನೀಡಲು ಸೂಚಿಸಿದೆ. ಇದಕ್ಕೆ ತಗಲುವ ಖರ್ಚಿನಲ್ಲಿ ಸರ್ವ ಶಿಕ್ಷಣ ಅಭಿಯಾನ ಶಿಕ್ಷಕರ ತರಬೇತಿಯ ಅನುದಾನದಿಂದ ಶಿಬಿರಾರ್ಥಿಯೊಬ್ಬರಿಗೆ ದಿನವೊಂದಕ್ಕೆ ರೂ.100/-ರಂತೆ ಬಳಸಿ ಉಳಿಕೆ ಖರ್ಚಿನ ಹಣವನ್ನು Unicef ನ ಅನುದಾನದಿಂದ ಭರಿಸುವುದು.

## ತರಬೇತಿ ಸ್ಥಳ/ಊಟ/ವಸತಿ/ಇತರೆ

ತರಬೇತಿ ನಡೆಸುವ ಸ್ಥಳ, ತರಬೇತಿ ನಡೆಸಲು ಅವಶ್ಯವಿರುವ ದೃಕ್ – ಶ್ರವಣ ಸಾಧನಗಳು, ಶಿಬಿರಾರ್ಥಿಗಳ ಊಟ, ವಸತಿ ವೆಚ್ಚವನ್ನು Unicef ನ ಅನುದಾನದಿಂದ ಭರಿಸಬೇಕಿದೆ. ಶಿಬಿರಾರ್ಥಿಗಳಿಗೆ ಉತ್ತಮ ಊಟ ವಸತಿ ದೊರಕಿಸುವ ದೃಷ್ಟಿಯಿಂದ ಲಭ್ಯವಿರುವ ಅನುದಾನದ ಪೂರ್ಣ ಪ್ರಮಾಣದ ಪ್ರಯೋಜನ ಪಡೆಯಬಹುದಾಗಿದೆ. ತರಬೇತಿಯು ಕಡ್ಡಾಯ ಸನಿವಾಸ ತರಬೇತಿಯಾಗಿರುವುದರಿಂದ ಶಿಬಿರಾರ್ಥಿಗಳ, ವಿಶೇಷವಾಗಿ ಮಹಿಳೆಯರ ವಸತಿಗಾಗಿ ಅವಶ್ಯ ಸುರಕ್ಷತೆಯಿರುವ, ಉತ್ತಮ ವಸತಿ ಸೌಲಭ್ಯ ಹಾಗೂ ಪೌಷ್ಠಿಕ, ರುಚಿಕರ ಆಹಾರ ಒದಗಿಸುವ ವ್ಯವಸ್ಥೆಯುಳ್ಳ ಹಾಗೂ ನಗರ ಪ್ರದೇಶದಿಂದ ದೂರವಿರುವ ಕೇಂದ್ರಗಳನ್ನು ಗುರುತಿಸಿ ತರಬೇತಿ ನಡೆಸಬೇಕು. ನೋಡಲ್ ಅಧಿಕಾರಿಗಳು ಅಥವಾ ಸುಗಮಕಾರರು [ಎಂಡಿಎಫ್]ಗಳು ಬೇರಾವ ಸ್ಥಳಗಳು ತರಬೇತಿಗಾಗಿ ಲಭ್ಯವಿಲ್ಲವೆಂದು/ಸೂಕ್ತವಲ್ಲವೆಂದು ಪ್ರಮಾಣಿಸಿದ ನಂತರವಷ್ಟೆ, ಡಯಟ್ ಅಥವಾ ಇತರೆ ನಗರದ ಮಧ್ಯಭಾಗದ ತರಬೇತಿ ಸಂಸ್ಥೆಗಳಲ್ಲಿ ತರಬೇತಿಗೆ ಅವಕಾಶ ಕಲ್ಪಿಸಬಹುದಾಗಿದೆ. [ಸಾಧ್ಯವಾದಷ್ಟು ಹೋಟೆಲ್, ಲಾಡ್ಜ್‌ಗಳಲ್ಲಿ ತರಬೇತಿ ನಡೆಸದಂತೆ ಕ್ರಮವಹಿಸುವುದು].

## ಸಹಾಯಕರ ಭತ್ಯೆ

QIPನ 19 ದಿನಗಳ ಹಾಗೂ SQIPನ 10 ದಿನಗಳ ತರಬೇತಿ ಅವಧಿಯ ಪ್ರತಿ ದಿನಕ್ಕೆ ರೂ.100/-ಗಳನ್ನು ಗ್ರೂಪ್ ಡಿ ರವರಿಗಾಗಿ ಮೀಸಲಿಸಿರುವುದರಿಂದ ಎಂಡಿಪಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಎಂ.ಡಿ.ಎಫ್.ಗಳಿಗೆ ನೆರವಾಗುವ ನೌಕರರಿಗೆ ಈ ಮೊತ್ತವನ್ನು ನೀಡಬಹುದಾಗಿದೆ. ಡಯಟ್‌ನ "ಡಿ" ಗ್ರೂಪ್ ನೌಕರರನ್ನು ಸರದಿ ಪ್ರಕಾರವೂ ಬಳಸಿಕೊಳ್ಳಬಹುದಾಗಿದೆ.

QIP ತರಬೇತಿಯು 6 ಹಂತಗಳಲ್ಲಿ ಹಾಗೂ SQIP 3 ತರಬೇತಿಯು ಹಂತಗಳಲ್ಲಿ ನಡೆಯುವುದರಿಂದ ಈ ಹಂತದಲ್ಲಿ ಶಿಬಿರಾರ್ಥಿಗಳ ನೋಂದಣಿ, ಪ್ರಯಾಣ ಭತ್ಯೆ ಪರಿಶೀಲನೆ, ವಿತರಣೆ ಹಾಗೂ ಖರ್ಚು ವೆಚ್ಚದ ದಾಖಲೀಕರಣಕ್ಕೆ ಲೆಕ್ಕಿಗರ/ಗುಮಾಸ್ತರ ಅವಶ್ಯಕತೆಯನ್ನು ಮನಗಂಡು ಪ್ರತಿ ಹಂತಕ್ಕೆ ರೂ.500/- ಕ್ಕೆ ಮೀರದಂತೆ ಗೌರವಧನ ನೀಡಿ ಡಯಟ್‌ನ ಲೆಕ್ಕ ಸಹಾಯಕರ/ಗುಮಾಸ್ತರ ನೆರವು ಪಡೆಯಬಹುದಾಗಿದೆ.

## ಶಿಬಿರಾರ್ಥಿಗಳ ಪ್ರಕಲ್ಪ ಅನುಷ್ಠಾನ ವೆಚ್ಚ

ಎಂ.ಡಿ.ಪಿ. ತರಬ್ಬೆತಿಯ ಪ್ರಾಯೋಗಿಕ ಅನುಷ್ಠಾನಕ್ಕಾಗಿ ಶಿಬಿರಾರ್ಥಿಗಳಿಗೆ (ಪ್ರತಿ ಜಿಲ್ಲೆಗೆ ಮೂರು ಪ್ರಕಲ್ಪಗಳಂತೆ) ಪ್ರಕಲ್ಪಗಳನ್ನು ಯೋಜಿಸಿ ಅನುಷ್ಠಾನಗೊಳಿಸಲು ತರಬೇತಿ ನೀಡಲಾಗುತ್ತಿದೆ. **[ಪ್ರಕಲ್ಪ ಗಳ ವಿವರ – ಅನುಬಂಧ** 7] ಪ್ರತಿ ಶಿಬಿರಾರ್ಥಿಗಳು ತಾವು ಆಯ್ದುಕೊಂಡ ಶಾಲೆಗಳಿಗೆ ಭೇಟಿ ನೀಡಿ ಪ್ರಕಲ್ಪಗಳ ಯೋಜನೆಯನ್ನು ತಯಾರಿಸಲು ಹಾಗೂ ಅನುಷ್ಠಾನಗೊಳಿಸಲು ತಗಲುವ ವೆಚ್ಚಗಳನ್ನು ರೂ.1500/- ಎಂದು ಅಂದಾಜಿಸಲಾಗಿದೆ. ಈ ಮೊತ್ತವನ್ನು QIP ಎರಡನೇ ಹಂತದ ಹತ್ತು ದಿನದ ತರಬೇತಿ ನಂತರ ಹಾಗೂ SQIP ಮೊದಲನೇ ಹಂತದ ಐದು ದಿನಗಳ ತರಬೇತಿ ನಂತರ REMS ಅನುದಾನದಿಂದ ಬಿಡುಗಡೆ ಮಾಡಬೇಕು. ಶಿಬಿರಾರ್ಥಿಗಳು ಈ ವೆಚ್ಚವನ್ನು ಕೆಳಕಂಡಂತೆ ಭರಿಸಬಹುದು:

1) ಕನಿಷ್ಠ 8 ಕ್ಷೇತ್ರ ಭೇಟಿಗಾಗಿ [ಪ್ರತಿ ಭೇಟಿಗೆ ರೂ.50/-ರಂತೆ ರೂ.400/-]
2) ಕನಿಷ್ಠ 6 ಗುಂಪು ಚರ್ಚೆ, ಸಭೆಗಳನ್ನು (ಶಿಕ್ಷಕರು, ಎಸ್.ಡಿ.ಎಂ.ಸಿ. ಸದಸ್ಯರು ಇತ್ಯಾದಿ ಸೇರಿ ಸುಮಾರು 15-20 ಜನರೊಂದಿಗೆ) ನೆಡೆಸಲು ಹಾಗೂ ಸಭೆಯ ಸಮಯದಲ್ಲಿ ಭರಿಸಬೇಕಾದ ಕಾಫಿ, ಟೀ & ಲಘು ಉಪಹಾರಕ್ಕಾಗಿ ವೆಚ್ಚ ಮಾಡಲು [ಪ್ರತಿ ಸಭೆಗೆ ರೂ.100/-ರಂತೆ ರೂ.600/-]
3) ದಾಖಲೀಕರಣ ಹಾಗೂ ವರದಿ ತಯಾರಿಕೆಗಾಗಿ [ರೂ.500/-]ರಂತೆ ವೆಚ್ಚ ಮಾಡಬಹುದಾಗಿದೆ.

( ಈ ವೆಚ್ಚಗಳ ಯಾವುದಾದರೂ ಶೀರ್ಷಿಕೆಯಲ್ಲಿ ಹೆಚ್ಚು/ಕಡಿಮೆಯಾದರೆ, ಇಲ್ಲಿನ ಶೀರ್ಷಿಕೆಗಳಲ್ಲಿ ಅಂತರ ಹೊಂದಾಣಿಕೆ ಮಾಡಿಕೂಳ್ಳಬಹುದು.) ಈ ವೆಚ್ಚದ ಮೂಲ ರಸೀದಿಗಳನ್ನು ಪ್ರಕಲ್ಪ ಮಂಡನೆಯ ನಂತರ ಶಿಬಿರಾರ್ಥಿಗಳು ಸಂಬಂಧಿಸಿದ ಸುಗಮಕಾರರ [ಎಂಡಿಎಫ್] ರವರಿಗೆ ಸಲ್ಲಿಸಿ, ಉಳಿಕೆ ಹಣವನ್ನು ಡಯಟ್‌ಗೆ ಮರುಪಾವತಿಸಬೇಕು.

## ಎಂ.ಡಿ.ಎಫ್‌ಗಳ ಕ್ಷೇತ್ರ ಭೇಟಿ ಭತ್ಯೆ

ಶಿಬಿರಾರ್ಥಿಗಳು ತಮ್ಮ ಪ್ರಕಲ್ಪ ಅನುಷ್ಠಾನಕ್ಕೆ ಯೋಗ್ಯವಾದ ಶಾಲೆ/ಕ್ಲಸ್ಟರ್‌ನ್ನು ಗುರುತಿಸಬೇಕು. ಆ ಶಾಲೆ/ಕ್ಲಸ್ಟರ್‌ನ ಸಮಸ್ಯೆಗಳನ್ನು ಪಟ್ಟಿಮಾಡಿ, ಪ್ರಕಲ್ಪದ ರೂಪುರೇಷೆಯನ್ನು ಸಿದ್ಧಪಡಿಸಲು ಹಾಗೂ ಯೋಜನೆಯನ್ನು ಪರಿಷ್ಕರಿಸಿ ಅನುಷ್ಠಾನಗೊಳಿಸಲು ಸುಗಮಕಾರರ ಮಾರ್ಗದರ್ಶನದ ಅವಶ್ಯಕತೆಯಿರುವುದರಿಂದ ಮಾರ್ಗದರ್ಶನ ಮಾಡುವ ಸುಗಮಕಾರರು ಪ್ರತಿ ಪ್ರಕಲ್ಪದ ಅನುಷ್ಠಾನಕ್ಕಾಗಿ ಶಾಲೆ/ಕ್ಲಸ್ಟರ್‌ಗೆ 3 ಬಾರಿ ಭೇಟಿ ನೀಡಲು ಅವಕಾಶ ಕಲ್ಪಿಸಲಾಗಿದೆ. ಈ ಭೇಟಿಯ ವೆಚ್ಚವನ್ನು [ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ] ಕರ್ನಾಟಕ ನಾಗರೀಕ ಸೇವಾ ನಿಯಮಗಳನುಸಾರ ಭರಿಸಬಹುದಾಗಿದೆ.

ಒಬ್ಬ ಸುಗಮಕಾರರು 5 ಪ್ರಕಲ್ಪಗಳನ್ನು ಮಾರ್ಗದರ್ಶನ ಮಾಡುವರೆಂದಾದರೆ ಒಟ್ಟು 15 ಕ್ಷೇತ್ರ ಭೇಟಿ ಮಾಡಬಹುದಾಗಿದೆ. ಕ್ಷೇತ್ರ ಭೇಟಿಯ ಅವಶ್ಯಕತೆಯನ್ನು ನಿರ್ಧರಿಸಿ ಪ್ರತಿ ಪ್ರಕಲ್ಪಕ್ಕೆ ಕನಿಷ್ಠ 2 ಭೇಟಿ ಕಡ್ಡಾಯವಾಗಿದ್ದು, ಹೆಚ್ಚುವರಿ ಭೇಟಿಯನ್ನು ಬೇರೆ ಪ್ರಕಲ್ಪಗಳಿಗೆ ಆಯಾ ಪ್ರಕಲ್ಪ ತಂಡದ ಸಾಮರ್ಥ್ಯ, ಸಂಬಂಧಿಸಿದ ಶಾಲಾ/ಕ್ಲಸ್ಟರ್ ಹಂತದ ಸಹಕಾರ, ಸಮಸ್ಯೆಗಳನ್ನಾಧರಿಸಿ ಅವಶ್ಯಕತೆಗಳಿಗನುಗುಣವಾಗಿ ಬಳಸಿಕೊಳ್ಳಬಹುದಾಗಿದೆ.

## ಎಂ.ಡಿ.ಎಫ್‌ಗಳ (ಸುಗಮಕಾರರ) ಪ್ರಕಲ್ಪ ಮಾರ್ಗದರ್ಶನ ಭತ್ಯೆ

ನಿರ್ವಹಣಾ ಅಭಿವೃದ್ಧಿ ತರಬೇತಿ ಹಾಗೂ ಪ್ರಕಲ್ಪ ಮಾರ್ಗದರ್ಶನದ ಸಮಯದಲ್ಲಿ ಸುಗಮಕಾರರು 19 ದಿನಗಳು ಸನಿವಾಸ ತರಬೇತಿ ಆಯೋಜಿಸುವವರು ಹಾಗೂ ಕನಿಷ್ಠ 15 ಕ್ಷೇತ್ರ ಭೇಟಿ ನಡೆಸುತ್ತಾರೆ. ಈ ಸಮಯದಲ್ಲಿ ಅವರು ಇತರೆ ಅಧಿಕಾರಿಗಳು, ಶಾಲಾ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಹಾಗೂ ಪೋಷಕರೊಂದಿಗೆ ಒಡನಾಡಲು ಮತ್ತು ಪ್ರಕಲ್ಪ ಮಾರ್ಗದರ್ಶನದ ಸಮಯದಲ್ಲಿ ಹೆಚ್ಚಾಗಿ ತಮ್ಮ ವೈಯಕ್ತಿಕ ದೂರವಾಣಿಯನ್ನು ಬಳಸುವುದರಿಂದ ಹಾಗೂ ಅವರು ಕ್ಷೇತ್ರ ಭೇಟಿ ನೀಡಿದಾಗ ಆ ಸಮಯದಲ್ಲಿ ಆಯೋಜಿಸುವ ಸಭೆಗಳ ಕಾಫಿ/ಟೀ ವೆಚ್ಚ ಹಾಗೂ ಇನ್ನಿತರ ಸಾಂಧರ್ಭಿಕ ವೆಚ್ಚಗಳನ್ನು ಭರಿಸಿರುವ ನಿದರ್ಶನವಿದೆ. ಈ ಹೆಚ್ಚುವರಿ ವೆಚ್ಚವನ್ನು ಸರಿದೂಗಿಸುವ ಉದ್ದೇಶದಿಂದ ಪ್ರತಿ ಶಿಬಿರಾರ್ಥಿಯ ಮಾರ್ಗದರ್ಶನ ವೆಚ್ಚ ರೂ.400/-ರಂತೆ ಪ್ರತಿ QIP ಹಾಗೂ SQIP 30 ಜನರ ಒಂದು ತಂಡದ ಮಾರ್ಗದರ್ಶನಕ್ಕಾಗಿ ರೂ.12,000/-[ಹನೆರಡು ಸಾವಿರ ರೂಪಾಯಿಗಳನ್ನು] ಗಳನ್ನು ಮೀಸಲಿರಿಸಿದೆ. ಒಂದು ತರಬೇತಿ ತಂಡದಲ್ಲಿ ಭಾಗವಹಿಸಿದ್ದ ಶಿಬಿರಾರ್ಥಿಗಳ ಸಂಖ್ಯೆಗನುಗುಣವಾಗಿ ಈ ಹಣವನ್ನು ಒಂದು ತಂಡದ ತರಬೇತಿಯಲ್ಲಿ ಹಾಗೂ ಪ್ರಕಲ್ಪ ಅನುಷ್ಠಾನದ ಎಲ್ಲಾ ಪ್ರಕ್ರಿಯೆಗಳಲ್ಲಿ ಭಾಗವಹಿಸಿದ್ದ ಆಯಾ ಜಿಲ್ಲೆಯ ಸುಗಮಕಾರರಿಗೆ ಸಮನಾಗಿ ಬಿಡುಗಡೆ ಮಾಡಿ ಹಾಗೂ ಸ್ವೀಕೃತಿಯನ್ನು ಪಡೆದು Unicefನ ಕಡತದಲ್ಲಿ ದಾಖಲಿಸಲು ಸೂಚಿಸಿದೆ. ಇತರೆ ಜಿಲ್ಲೆಗಳಿಂದ ತರಬೇತಿ ನೀಡಲು ಆಗಮಿಸುವ ಎಂಡಿಎಫ್‌ಗಳಿಗೂ ಇದೇ ಅನುದಾನದಿಂದ ಮಾರ್ಗದರ್ಶನ ಭತ್ಯೆಯನ್ನು ಭರಿಸತಕ್ಕದ್ದು.

## ಇತರೆ ಜಿಲ್ಲೆಗಳಿಗೆ ಎಂಡಿಎಫ್‌ಗಳ ಸಹಕಾರ ನೀಡುವ ಕುರಿತು

ಕೆಲವು ಜಿಲ್ಲೆಗಳಲ್ಲಿ ಎಂಡಿಎಫ್‌ಗಳ ಕೊರತೆ ಇರುವುದರಿಂದ ಈ ಭಾಗದ ವಿಷಯದ ತರಬೇತಿ ನೀಡಲು [ಒಟ್ಟು 6 ದಿನಗಳು] ಇತರೆ ಜಿಲ್ಲೆಗಳಿಂದ ಎಂಡಿಎಫ್‌ಗಳು ಭೇಟಿ ನೀಡಬೇಕಾಗಿದೆ. ಭೇಟಿ ನೀಡುವ ಎಂಡಿಎಫ್‌ಗಳ ವಿವರಗಳನ್ನು **ಅನುಬಂಧ-8**ರಲ್ಲಿ ನೀಡಲಾಗಿದೆ. ಆಯಾ ಜಿಲ್ಲೆಯವರು ತಮ್ಮ ಜಿಲ್ಲೆಯ ತರಬೇತಿಯ ದಿನಗಳಲ್ಲಿ ಭೇಟಿ ನೀಡುವ ಎಂಡಿಎಫ್‌ಗಳಿಗೆ ಮುಂಚಿತವಾಗಿ ತರಬೇತಿಯ ದಿನಾಂಕ ಹಾಗೂ ವಿಷಯಗಳ ವಿವರವನ್ನು ತಿಳಿಸಬೇಕು. ತರಬೇತಿಗಳು ಎರಡು ಹಂತದಲ್ಲಿ ಹಂಚಿಕೆಯಾಗಿದ್ದಲ್ಲಿ ಆಯಾ ಸಂಬಂಧಿಸಿದ ಆಯಾ ಹಂತಗಳಿಗೆ ಇತರೆ ಜಿಲ್ಲೆಗಳಿಂದ ನಿಯೋಜನೆಯಾದ ಎಂಡಿಎಫ್‌ಗಳು ಭೇಟಿ ನೀಡಲು ಅನುಮತಿ ನೀಡಲಾಗಿದೆ. [ಒಂದು ಜಿಲ್ಲೆಗೆ ಒಟ್ಟು ಎರಡು ಬಾರಿ ಭೇಟಿ (ಗರಿಷ್ಠ ಆರು+ನಾಲ್ಕು ಒಟ್ಟು ಹತ್ತು ದಿನಗಳು) ನೀಡಬಹುದಾಗಿದೆ].

ಈ ರೀತಿ ಭೇಟಿ ನೀಡುವ ಎಂಡಿಎಫ್‌ಗಳಿಗೆ ಪ್ರಯಾಣ ಮತ್ತು ದಿನಭತ್ಯೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾನುಸಾರ ನೀಡಬೇಕು. ಇದಲ್ಲದೆ ಊಟ/ಉಪಹಾರ ಹಾಗೂ ವಸತಿಯನ್ನು ಎಂ.ಡಿ.ಎಫ್.ರವರನ್ನು ಆಹ್ವಾನಿಸುವ ಜಿಲ್ಲೆಯು ಭರಿಸತಕ್ಕದ್ದು. ಇದಲ್ಲದೆ ಭೇಟಿ ನೀಡಿದ ಎಂಡಿಎಫ್‌ಗಳಿಗೆ ಸುಗಮಕಾರರ ಪ್ರಕಲ್ಪ ಮಾರ್ಗದರ್ಶನ ಭತ್ಯೆಯ ಅನುದಾನದಿಂದ ದಿನವೊಂದಕ್ಕೆ ರೂ.200/-ರಂತೆ ನೀಡಬಹುದಾಗಿದೆ.

## ವಿಶೇಷ ವೀಕ್ಷಕರು ( ಶಿಕ್ಷಣ ಇಲಾಖೆಯ ಅಧಿಕಾರಿಗಳು)

ಐಐಎಸ್‌ಸಿ ಸಂಸ್ಥೆಯಲ್ಲಿ ನಿರ್ವಹಣಾ ಅಭಿವೃದ್ಧಿ ತರಬೇತಿ ಪಡೆದ ಶಿಕ್ಷಣ ಇಲಾಖೆಯ ಒಬ್ಬ ಅಧಿಕಾರಿಯು ತರಬೇತಿಯನ್ನು ಅವಲೋಕಿಸಲು ಪ್ರತಿ ಜಿಲ್ಲೆಗೆ ಭೇಟಿ ನೀಡುತ್ತಾರೆ. ಭೇಟಿ ನೀಡುವ ಅಧಿಕಾರಿಗಳ ವಿವರಗಳನ್ನು **ಅನುಬಂಧ-9**ರಲ್ಲಿ ನೀಡಲಾಗಿದೆ. ಆಯಾ ಜಿಲ್ಲೆಯವರು ತಮ್ಮ ಜಿಲ್ಲೆಯ ತರಬೇತಿಯ ದಿನಗಳಲ್ಲಿ ಭೇಟಿ ನೀಡುವ ಅಧಿಕಾರಿಗಳಿಗೆ ಮುಂಚಿತವಾಗಿ ತರಬೇತಿಯ ದಿನಾಂಕ ಹಾಗೂ ವಿಷಯಗಳ ವಿವರವನ್ನು ತಿಳಿಸಬೇಕು. ಇವರು QIPನ 19 ದಿನಗಳ ತರಬೇತಿ ಮತ್ತು / ಅಥವಾ SQIPನ 10 ದಿನಗಳ ತರಬೇತಿಯನ್ನು ವೀಕ್ಷಿಸುತ್ತಾರೆ. ಇವರ ಪ್ರಯಾಣ ವೆಚ್ಚವನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾನುಸಾರ ನೀಡಬೇಕು ಮತ್ತು ಊಟ, ವಸತಿಯನ್ನು ತರಬೇತಿ ಆಯೋಜಿಸುವ ಡಯಟ್‌ನ ವತಿಯಿಂದ ನೀಡಬೇಕು.

## ಎಂಡಿಪಿ ಶೈಕ್ಷಣಿಕ ಸಮಾವೇಶ

ಎಂಡಿಪಿ ಕಾರ್ಯಕ್ರಮ ನಡೆಯುತ್ತಿರುವ 19 ಜಿಲ್ಲೆಗಳಲ್ಲಿ ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲಾ ಕ್ಷೇತ್ರ/ಸಮೂಹ ಸಂಪನ್ಮೂಲ ವ್ಯಕ್ತಿಗಳನ್ನು, ಆಯ್ದ ಶಾಲಾ ಮುಖ್ಯಸ್ಥರನ್ನು ಕ್ಲಸರ್, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಶಿಕ್ಷಣಾಧಿಕಾರಿಗಳನ್ನು ಒಂದೆಡೆ ಸೇರಿಸಿ ಎಂಡಿಪಿ ಅನುಷ್ಠಾನದಿಂದ ಕಂಡುಕೊಂಡ ಕಲಿಕೆಗಳನ್ನು ಪರಸ್ಪರ ಹಂಚಿಕೊಳ್ಳಲು ಹಾಗೂ ಹೊಸ ಆಲೋಚನೆಗಳ ಅನುಷ್ಠಾನಕ್ಕೆ ವೇದಿಕೆ ಕಲ್ಪಿಸಲು "ಜಿಲ್ಲಾ ಮಟ್ಟದಲ್ಲಿ ಎಂಡಿಪಿ ಶೈಕ್ಷಣಿಕ ಸಮಾವೇಶ"ವನ್ನು ನಡೆಸಲು ತೀರ್ಮಾನಿಸಲಾಗಿದೆ. ಈ ಕಾರ್ಯಕ್ರಮವನ್ನು ಯುನಿಸೆಫ್ ಅನುದಾನ ನೆರವಿನಿಂದ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದೆ. ಈ ಸಮಾವೇಶಕ್ಕೆ ಲಭ್ಯವಿರುವ ಅನುದಾನ ಹಾಗೂ ಬಳಕೆಯ ಕ್ರಮಗಳನ್ನು ಎರಡನೇ ತ್ರೈಮಾಸಿಕ ಹಣದ ಬಿಡುಗಡೆಗೆ ಮುನ್ನ ತಿಳಿಸಲಾಗುವುದು.

## ಸೂಚನೆ

ಹೆಚ್ಚಿನ ವಿವರಗಳಿಗೆ ಶ್ರೀ.ಡಿ.ಆರ್.ಪ್ರಸನ್ನಕುಮಾರ್, ಸಮನ್ವಯಾಧಿಕಾರಿಗಳು, ನಿರ್ವಹಣಾಭಿವೃದ್ಧಿ ಕಾರ್ಯಕ್ರಮ-1, ಪಾಲಿಸಿ ಪ್ಲಾನಿಂಗ್ ಘಟಕ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು - 560 001 ದೂರವಾಣಿ-080-22484717, [ಮೊಬೈಲ್ ಸಂಖ್ಯೆ; 9880196633] ಇವರನ್ನು ಸಂಪರ್ಕಿಸುವುದು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

**ಗೆ: ಅಗತ್ಯ ಕ್ರಮಕ್ಕಾಗಿ**

1. ಸಂಬಂಧಪಟ್ಟ ಜಿಲ್ಲೆಗಳ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು, ಡಯಟ್
2. ಸಂಬಂಧಪಟ್ಟ ಜಿಲ್ಲೆಗಳ ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮದ ನೋಡಲ್ ಅಧಿಕಾರಿಗಳು

**ಪ್ರತಿ : ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.**

3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ, ಧಾರವಾಡ
5. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು
6. ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು
7. ಜಂಟಿ ನಿರ್ದೇಶಕರು(ಗುಣಮಟ್ಟ), ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು
8. ಸಮನ್ವಯಾಧಿಕಾರಿಗಳು, ಪಾಲಿಸಿ ಪ್ಲಾನಿಂಗ್ ಘಟಕ
9. ಎಂ.ಡಿ.ಎಫ್ ಗಳಿಗೆ
10. ಕಛೇರಿ ಪ್ರತಿ